# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿದ ಭೂಮಿ ಹಾಗೂ ಅವುಗಳನ್ನು ಸಂರಕ್ಷಿಸುವ ಬಗ್ಗೆ.

ಓದಲಾಗಿದೆ: ದಿನಾಂಕ **೨೪-೦೪-೨೦೦೭**ರಂದು ವಿಧಾನಸಭೆಯ ಜಂಟಿ ಸದನ ಸಮಿತಿಯ ಸಭೆ.

-----

**ಪ್ರಸ್ತಾವನೆ:**

ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಶಾಲಾ:ಕಾಲೇಜು:ಕಛೇರಿಗಳಿಗೆ ಸರ್ಕಾರಿ ಭೂಮಿ ಒತ್ತುವರಿಯಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಕುರಿತಂತೆ ದಿನಾಂಕ **೨೪-೦೪-೨೦೦೭**ರಂದು ನಡೆದ ವಿಧಾನ ಸಭೆಯ ಜಂಟಿ ಸದನ ಸಮಿತಿ ಸಭೆಯಲ್ಲಿ, ಚರ್ಚಿಸಿದ ನಂತರ ಒತ್ತುವರಿಯಾದ ಸರ್ಕಾರಿ ಜಮೀನನ್ನು ತ್ವರಿತವಾಗಿ ತೆರವು ಮಾಡಲು ಕ್ರಮ ಜರುಗಿಸುವುದರ ಜೊತೆಗೆ ಸರ್ಕಾರಿ ಜಮೀನು ಅತಿಕ್ರಮಣ ಆಗದಂತೆ ತಡೆಗಟ್ಟಲು ಇಲಾಖೆಯ ಜಮೀನುಗಳನ್ನು ದಾಖಲೀಕರಣ, ಭೂಮಾಪನ, ಸಂರಕ್ಷಣೆ ಮಾಡಲು ಅವಶ್ಯ ಕ್ರಮ ಜರುಗಿಸುವಂತೆ ಸಮಿತಿ ಸೂಚಿಸಿರುತ್ತದೆ.

ಆ ಹಿನ್ನಲೆಯಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಇಡಿ ೫೬ ವಿವಿಧ ೨೦೦೬,</u>**

**<u>ಬೆಂಗಳೂರು, ದಿನಾಂಕ:೦೩-೦೫-೨೦೦೭</u>**

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಶಾಲೆಗಳು ಹಾಗೂ ಇಲಾಖಾ ಕಛೇರಿಗಳ ಭೂಮಿ ಹಾಗೂ ಇತರೆ ಆಸ್ತಿಗಳು ಅತಿಕ್ರಮವಾಗದಂತೆ ತಡೆಗಟ್ಟುವ ಸಲುವಾಗಿ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಬ್ಬ ಶಿಕ್ಷಣಾಧಿಕಾರಿಯನ್ನು, ಜಿಲ್ಲಾ ಮಟ್ಟದಲ್ಲಿ, ಮತ್ತು ಕ್ಷೇತ್ರ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯನ್ನು (Estate Officer) 'ಎಸ್ಟೇಟ್ ಆಫೀಸರ್' ಆಗಿ ನೇಮಕ ಮಾಡಲಾಗಿದೆ.

ಸದರಿ ಅಧಿಕಾರಿ ಈ ಕೆಳಗಿನ ಜವಬ್ದಾರಿಗಳನ್ನು ಹೊಂದಿರುತ್ತಾರೆ.

(೧) ಜಿಲ್ಲಾ ವ್ಯಾಪ್ತಿಗೆ ಬರುವ ಸರ್ಕಾರಿ ಶಾಲೆ ಹಾಗೂ ಕಛೇರಿಯ ಭೂಮಿ ಮತ್ತು ಕಛೇರಿಗಳ ಸ್ಥಿರಾಸ್ತಿ ವಿವರಗಳನ್ನೊಳಗೊಂಡ ವಹಿ (ರಿಜಿಸ್ಟಾರ್) ನಿರ್ವಹಿಸುವುದು.

(೨) ಅಂತಹ ಭೂಮಿಗಳ, ಕಛೇರಿಗಳ, ಭೂ ದಾಖಲೆಗಳ ಪ್ರತಿಯನ್ನು ಇಡುವುದು.

(೩) ಭೂ ದಾಖಲೆಯ ಪ್ರಕಾರ ಇಲಾಖೆಯ ಹೆಸರಿನಲ್ಲಿ ಸದರಿ ಸ್ಥಿರಾಸಿ ಇಲ್ಲದಿದ್ದರೆ ಇಲಾಖೆಯ ಹೆಸರನ್ನು ನಮೂದಿಸಲು ಅಗತ್ಯ ಕ್ರಮ ಜರುಗಿಸುವುದು.

(೪) ಅಂತಹ ಭೂಮಿಗಳ ಅವಶ್ಯವಿದ್ದಲ್ಲಿ ಭೂಮಾಪನ ಇಲಾಖೆಯಿಂದ ಸರ್ವೇ ಮಾಡಿಸಿ, ಸರಿಯಾದ ಭೂಮಾಪನ ದಾಖಲೆಗಳ ಪ್ರತಿಗಳನ್ನು ಹೊಂದುವುದು. ಸರ್ವೇ ಕಾರ್ಯಕ್ಕೆ ಅಗತ್ಯ ಅನುದಾನವನ್ನು ಇಲಾಖೆಯ ಸಂಬಳೇತರ ವೆಚ್ಚಗಳಲ್ಲಿ ಭರಿಸುವುದು.

(೫) ಖಾಲಿ ಜಮೀನು ಇದ್ದಲ್ಲಿ ಬೌಂಡರಿ ಗುರುತಿಸಿ ಇದು 'ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದ ಆಸ್ತಿ' ಎಂಬುದಾಗಿ ಫಲಕ ಹಾಕುವುದು.

(೬) ಅಂತಹ ಸಂಸ್ಥೆಗಳ ಭೂಮಿಯ ಸುತ್ತ ತಂತಿ ಬೇಲಿ ಅಥವಾ ಕಾಂಪೌಂಡ್‌ನ್ನು ನಿರ್ಮಿಸಲು ವಿವಿಧ ಸರ್ಕಾರಿ ಯೋಜನೆಗಳಡಿ ಹಿಂಬಾಲಿಸುವುದು.

(೭) ವಿವಿಧ ಶಾಲೆ ಹಾಗೂ ಕಛೇರಿಗಳು ಹೊಂದಿರುವ ಭೂಮಿಯ ಸ್ಥಿತಿ ಕುರಿತಂತೆ ಜಿಲ್ಲೆಯ ಉಪನಿರ್ದೇಶಕರು ಪ್ರತಿ ಆರು ತಿಂಗಳಿಗೊಮ್ಮೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಎಂ.ನಂದಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, (ಸಾಮಾನ್ಯ).

ಗೆ,

೧. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
೨. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
೩. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
೪. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ ೨೦ ಪ್ರತಿಗಳೊಂದಿಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜಾರಿಗೊಳಿಸುವಂತೆ ಕೋರಲಾಗಿದೆ)
೫. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು. ಮುಂದಿನ ಶಿಕ್ಷಣ ವಾರ್ತೆ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ
೬. ಶಾಖಾ ರಕ್ಷಾ ಕಡತ. ೭. ಹೆಚ್ಚುವರಿ ಪ್ರತಿ-೧೦.